
# ನೀ ನನಗಿದ್ದರೆ ನಾ ನಿನಗೆ



ಕೋಳಿಯಮ್ಮ ತನ್ನ ಪುಟ್ಟ ಮಕ್ಕಳ ಜೊತೆಗೆ ಹಳ್ಳಿಯೊಂದರಲ್ಲಿ ವಾಸಿಸುತ್ತಿದ್ದಳು. ಅವಳಿದ್ದ ಹಿತ್ತಲ ಮನೆಯಲ್ಲಿ ಆ ಮನೆಯ ಯಜಮಾನಿ ತನ್ನ ಮನೆಯವರಿಗೆ ದಿನಾ ಬಗೆಬಗೆಯ ತಿಂಡಿ ಮಾಡುತ್ತಿದ್ದಳು. ಅವರು ತಿನ್ನುವ ಹೊತ್ತಿಗೆ ಆ ಘಮಘಮಕ್ಕೆ ಪುಟ್ಟ ಮರಿ ಕೋಳಿಗಳು ಅಂಗಳಕ್ಕೆ ಧಾವಿಸಿ ಬರುತ್ತಿದ್ದವು. ಮನೆಯ ಮಕ್ಕಳು ತಾವು ತಿನ್ನುವಾಗ ಮರಿಗಳಿಗೆ ಸ್ವಲ್ಪ ತಿಂಡಿ ಹಾಕುತ್ತಿದ್ದರು. ಕೋಳಿಯಮ್ಮನಿಗೆ ಅದೆಲ್ಲ ಸರಿ ಬರುತ್ತಿರಲಿಲ್ಲ. ‘ಅಂಗಳ ಕೆದಕಿದರೆ ಏನಾದರೂ ಹುಳುವೋ, ಕೀಟವೋ, ಹಾತೆಯೋ ಸಿಗುತ್ತದೆ. ಅದನ್ನು ತಿಂದು ಹೊಟ್ಟೆ ತುಂಬಿಸಬಾರದೇ? ದಿನಾ ಮನೆಯವರ ತಿಂಡಿ ಹೊತ್ತಿಗೆ ಬಾಗಿಲಿನಲ್ಲಿ ಕಾದು ಆಸೆಬುರುಕ ಮಕ್ಕಳ ಹಾಗೆ ನೀರೂರಿಸಿಕೊಳ್ಳುವ ಗತಿ ಬೇಕಾ?’ ಎಂದು ಗದರುತ್ತಿದ್ದಳು. ಆದರೂ ಕೋಳಿ ಚಿಳ್ಳೆ ಪಿಳ್ಳೆಗಳು ಅಮ್ಮನ ಮಾತನ್ನು ಕಿವಿಗೆ ಹಾಕುತ್ತಿರಲಿಲ್ಲ. ಅವಳು ಹೇಳಿದ ಹಾಗೇ ಆಗಿಹೋಯಿತು ಒಂದು ದಿನ.

ಅಂದು ಮನೆಯವರೆಲ್ಲ ದೂರದ ಊರಿಗೆ ಶುಭ ಸಮಾರಂಭಕ್ಕೆ ಹೊರಟರು. ಬೆಳಿಗ್ಗೆ ಬೇಗ ಎದ್ದು ಹೊರಟ ಕಾರಣ ತಿಂಡಿ ಮಾಡಲಿಲ್ಲ. ಸೋಮಾರಿಗಳಾಗಿ ಬಿಸಿಲು ಏರುವ ತನಕ ಗಾಢ ನಿದ್ದೆ ಮಾಡಿದ ಕೋಳಿ ಮರಿಗಳಿಗೆ ಹಸಿವೆಯಿಂದ ಹೊಟ್ಟೆ ಚುರುಚುರು ಶಬ್ದ ಆಗುವಾಗ ಎಚ್ಚರವಾಯಿತು. ಕಣ್ಣು ಹೊಸಕಿ ನೋಡಿದರೆ ಸೂರ್ಯ ತುಂಬಾ ಮೇಲೆ ಬಂದಾಗಿತ್ತು. ಲಗುಬಗನೆ ಎದ್ದವರೇ ಮನೆಯ ಮುಂಬಾಗಿಲ ಬುಡಕ್ಕೆ ಓಡಿದವು. ಅಲ್ಲೇನಿದೆ? ಮನೆಯವರೆಲ್ಲ ಬೀಗ ಹಾಕಿ ಪರಊರಿಗೆ ಸಾಗಿದ್ದರು. ಹಸಿವಿನಿಂದ ಕಿರುಚುತ್ತ, ಚೀರಾಡುತ್ತ ಮರಿಗಳು ಕೊಕ್, ಕೊಕ್, ಕೊಕ್, ಕೊಕ್ ಎಂದು ಅರಚುತ್ತ ಅತ್ತಿತ್ತ ಓಡಾಡಿದವು.

‘ಮಕ್ಕಳೇ ಸ್ವಲ್ಪ ಮಣ್ಣು ಕೆದಕಿದರೆ ರುಚಿಕಟ್ಟಾದ ಹುಳುಗಳು ಸಿಗದೆ ಇರುತ್ತವಾ? ಚೆನ್ನಾಗಿ ಜಗಿದು ತಿನ್ನಿ’ ಎಂದು ಕಳಿಸಲು ನೋಡಿದಳು. ಆದರೂ ಅವುಗಳು ಕೇಳಲಿಲ್ಲ. ದಿನಾ ಮನೆಯವರು ಕೊಡುವ ಇಡ್ಲಿ, ದೋಸೆ, ಚಪಾತಿ, ಕಡುಬು ತಿಂದ ಎಳೆ ನಾಲಿಗೆಗೆ ಹುಳ, ಹುಪ್ಪಟೆ ಹಿಡಿಸೀತೇ? ಒಲ್ಲೆ, ಒಲ್ಲೆ ಎಂದು ಕೊಕ್, ಕೊಕ್, ಕೊಕ್ ಎಂದು ಕಿರುಚಾಡಿದವು. ಅಮ್ಮನೇ ಸೋತು ನೆಲವನ್ನು ಕಾಲಿನಲ್ಲಿ ಕೆರೆದು ಹುಳು ಹುಡುಕಿತು. ಮನೆಯ ಹಟ್ಟಿಯ ಬಾಗಿಲಿಗೆ ಹೋಗಿ ಅಲ್ಲಿದ್ದ ಸೆಗಣಿಯ ರಾಶಿಯನ್ನು ಕೆದರಿ ನೋಡಿತು. ಧಾರಾಳವಾಗಿ ಸೆಗಣಿಯ ಹುಳುಗಳು ಸಿಕ್ಕಿತು. ಅಮ್ಮ ಹಿಗ್ಗಿನಿಂದ ‘ಬನ್ನಿ ಮಕ್ಕಳೇ ಕುರುಕಲು ತಿಂಡಿ ತಿನ್ನಿ’ ಎಂದು ಉಪಚಾರ ಮಾಡಿ ಕರೆಯಿತು. ಮೂತಿ ಉಬ್ಬಿಸಿದ ಮರಿಗಳು ಒಪ್ಪಲಿಲ್ಲ. ಅವುಗಳು ಹಸಿದು ಕೂತಾಗ ಅಮ್ಮನಿಗೆ ತಿಂಡಿ ಇಳಿಯಲಿಲ್ಲ.

‘ಸರಿ. ಏನು ಬೇಕು ಹೇಳಿ. ಮಾಡುವ. ಆದರೆ ನೀವಿಷ್ಟೂ ಮರಿಗಳಿಗೆ ದೋಸೆ ಮಾಡಬೇಕಾದರೆ ನಿಮ್ಮೆಲ್ಲರ ಸಹಾಯ ಬೇಕು. ಅದಿಲ್ಲವಾದರೆ ನನ್ನಿಂದ ಆಗದು. ಹೇಳಿ ಈಗ. ಸಹಾಯ ಮಾಡುವಿರಾದರೆ ಮಾತ್ರ ತಿಂಡಿ’ ಎಂದಿತು ಅಮ್ಮ. ಮರಿಗಳೆಲ್ಲ ಒಪ್ಪಿದವು.

ಅಮ್ಮ ಅವರ ಜೊತೆ ಮನೆಯ ಹಿತ್ತಲಿನಲ್ಲಿ ಇಟ್ಟ ಅಕ್ಕಿಯ ಗೋಣಿಯಿಂದ ಅಕ್ಕಿಕಾಳು ತರ ಹೇಳಿತು. ‘ಅಯ್ಯಯ್ಯೋ ಅಮ್ಮಾ, ನಮ್ಮ ಕೊಕ್ಕು ಮುರಿದೇ ಹೋಗುತ್ತದೆ. ಸಣ್ಣ ಮಕ್ಕಳ ಕೈಲಿ ಕೆಲಸ ಮಾಡಿಸಬಾರದು’ ಎಂದವು. ಅಮ್ಮನೇ ಮನೆಯ ಹಿಂದೆ ಹೋಯಿತು ಒಡತಿ ಅಕ್ಕಿಯ ಗೋಣಿಯನ್ನು ಒಳಗಡೆ ಇರಿಸಿದ್ದಳು. ಪರವಾಗಿಲ್ಲ ಎಂದು ಅಮ್ಮ ಮನೆಯ ಹಿತ್ತಲಿನಲ್ಲಿ ಅರಸಿತು. ಅಲ್ಲಿ ಅದಕ್ಕೆ ಅಕ್ಕಿ ತೊಳೆಯುವಾಗ ನೀರಿನ ಜೊತೆ ಬಾಳೆಯ ಮರದ ಬುಡಕ್ಕೆ ಬಿದ್ದ